# ಕರ್ನಾಟಕ ಲೋಕಾಯುಕ್ತ

ನಂ.ಕಂಪ್ಲೆಂಟ್/ಉಪಲೋಕ್/ಬಿಜಿಎಂ-382/2015/ಪಿಪಿ

ಬಹುಮಹಡಿಗಳ ಕಟ್ಟಡ,
ಡಾ:ಅಂಬೇಡ್ಕರ್ ವೀಧಿ,
ಬೆಂಗಳೂರು.
ದಿನಾಂಕ : 06/01/2017

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(3) ರನ್ವಯ ವರದಿ

**ವಿಷಯ:** (1) ಶ್ರೀ ಎಸ್.ಪಿ. ಕುಲಕರ್ಣಿ, ಕಿರಿಯ ಅಭಿಯಂತರರು (ನಿವೃತ್ತ), ನಂ.12, ಹೊಲಗಾಲುವೆ ಉಪವಿಭಾಗ, ಕೆ.ಬಿ.ಜೆ.ಎನ್.ಎಲ್., ಆಲಮಟ್ಟಿ, ಬಸವನಬಾಗೇವಾಡಿ ತಾಲ್ಲೂಕು, ವಿಜಾಪುರ ಜಿಲ್ಲೆ ಮತ್ತು (2) ಶ್ರೀ ಎನ್.ಡಿ. ಪಾಟೀಲ್, ಕಾರ್ಯನಿರ್ವಾಹಕ ಅಭಿಯಂತರರು, ನಂ.3, ಹೊಲಗಾಲುವೆ ವಿಭಾಗ, ಕೆ.ಬಿ.ಜೆ.ಎನ್.ಎಲ್., ಆಲಮಟ್ಟಿ, ಬಸವನಬಾಗೇವಾಡಿ ತಾಲ್ಲೂಕು, ವಿಜಾಪುರ ಜಿಲ್ಲೆ ಇವರುಗಳು ಸರ್ಕಾರಿ/ಸಾರ್ವಜನಿಕ ನೌಕರರಾಗಿ ದುರ್ನಡತೆ ಎಸಗಿರುವ ಕುರಿತು ವರದಿ.

*-*-*

ಪ್ರಕರಣದ ದೂರುದಾರರಾದ ಶ್ರೀ ಮಾಯಪ್ಪ ಕೆಂಚಪ್ಪ ಮಾದರ ಇವರು ಈ ಸಂಸ್ಥೆಗೆ ದೂರೊಂದನ್ನು ಸಲ್ಲಿಸಿ ಕೃಷ್ಣ ಭಾಗ್ಯ ಜಲನಿಗಮ ನಿಯಮಿತ ಇದರ ಎಫ್.ಐ.ಸಿ ವಿಭಾಗದಡಿಯಲ್ಲಿ ವಿಜಯಪುರ ಜಿಲ್ಲೆಯ ಮುದ್ದೇಬಿಹಾಳ ತಾಲ್ಲೂಕಿನ ತಂಗಡಗಿಯಿಂದ ನಲವತ್ತವಾಡ ವರೆಗೆ 2013-14 ನೇ ಸಾಲಿನಲ್ಲಿ ರೂ.124.64 ಲಕ್ಷಗಳ ವೆಚ್ಚದಲ್ಲಿ ಒಟ್ಟು 7.50 ಕಿ.ಮೀ ಉದ್ದದ ರಸ್ತೆಗೆ ಕಾಮಗಾರಿಯನ್ನು ಮಾಡಲಾಗಿರುತ್ತದೆ. ಸದರಿ ರಸ್ತೆಯನ್ನು ಶ್ರೀ. ಎಸ್.ಬಿ. ಪಾಟೀಲ್, ಪ್ರಥಮ ದರ್ಜೆ ಗುತ್ತಿಗೆದಾರರು ಇವರ ಕಡೆಯಿಂದ ಶ್ರೀ ಎಸ್.ಪಿ. ಕುಲಕರ್ಣಿ, ಕಿರಿಯ ಅಭಿಯಂತರರರು ಇವರ ಮೇಲ್ ಉಸ್ತುವಾರಿಯಲ್ಲಿ ನಿರ್ವಹಿಸಲಾಗಿರುತ್ತದೆ. ಸದರಿ ರಸ್ತೆಯ ಕಾಮಗಾರಿಯು ಕಳಪೆ ಮಟ್ಟದ್ದಾಗಿರುತ್ತದೆ ಹಾಗೂ ಸದರಿ ರಸ್ತೆ ಮಾಡಲು ಬಳಸಲಾಗಿರುವ ಡಾಂಬರಿನಲ್ಲಿ ಸುಟ್ಟ ಲ್ಯಾಲ್ ಮಿಶ್ರಣ ಮಾಡಿ ಕಳಪೆ ಮಾಡಲಾಗಿರುತ್ತದೆ. ಇದರಿಂದ ಈಗಾಗಲೇ ರಸ್ತೆ ಕಿತ್ತು ಹೋಗಿರುತ್ತದೆ. 30 ವರ್ಷಗಳಿಂದ ಅಲ್ಲಿ ರಸ್ತೆ ಇರಲಿಲ್ಲ, ಇಲ್ಲಿಯ ಜನರ ಹೋರಾಟದ ಫಲವಾಗಿ ರಸ್ತೆಯನ್ನು ಮಾಡಿದ್ದು, ಈಗ ರಸ್ತೆಯು ಕಳಪೆಯಾಗಿ, ರಸ್ತೆ ಇದ್ದು ಇಲ್ಲದಂತಾಗಿರುತ್ತದೆ, ಇದನ್ನು ಕೇಳಲು ಗುತ್ತಿಗೆದಾರರ ಬಳಿ ಹೋದಾಗ ಜೀವ ಬೆದರಿಕೆ ಹಾಕಿರುತ್ತಾರೆ. ಆದ್ದರಿಂದ ಈ ವಿಚಾರದಲ್ಲಿ ಸದರಿ ಗುತ್ತಿಗೆದಾರರ ಮೇಲೆ ಹಾಗೂ ಅವರಿಗೆ ಸಹಕರಿಸಿದ ಕಿರಿಯ ಅಭಿಯಂತರರ ಮೇಲೆ ಕ್ರಮ ಜರುಗಿಸಬೇಕೆಂದು ಕೋರಿರುತ್ತಾರೆ. ಸದರಿ ದೂರಿನ ಆಧಾರದ ಮೇಲೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 9 ರಡಿ ಪ್ರದತ್ತವಾದ ಅಧಿಕಾರದಡಿ ತನಿಖೆಗೆ ಆದೇಶಿಸಲಾಗಿರುತ್ತದೆ.

2. ಸದರಿ ದೂರಿನ ಆಧಾರದ ಮೇಲೆ ಎದುರುದಾರರುಗಳ ಆಕ್ಷೇಪಣೆಯನ್ನು ಕರೆಯಲಾಗಿದ್ದು, 1ನೇ ಎದುರುದಾರರು ತಮ್ಮ ಆಕ್ಷೇಪಣೆಯನ್ನು ಸಲ್ಲಿಸಿರುತ್ತಾರೆ. 1ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ

N. [signature]

ತಾವು ಅಂದಾಜು ಪಟ್ಟಿಯಂತೆ ಕೆಲಸ ನಿರ್ವಹಿಸಲಾಗಿ ಮತ್ತು ಇದರ ರಸ್ತೆಯ ಗುಣಮಟ್ಟವನ್ನು ಆಲಮಟ್ಟಿಯ ಗುಣಮಟ್ಟ ನಿಯಂತ್ರಣ ವಿಭಾಗ-1 ರವರು ಪರೀಕ್ಷಿಸಿ ಪ್ರಮಾಣ ಪತ್ರ ನೀಡಿರುತ್ತಾರೆ. ಆದ್ದರಿಂದ ತಾವು ನಿರ್ವಹಿಸಿರುವ ಕಾಮಗಾರಿಯು ಕಳಪೆ ಕಾಮಗಾರಿ ಅಲ್ಲವೆಂದು ತಿಳಿಸಿರುತ್ತಾರೆ.

3. 2ನೇ ಎದುರುದಾರರಿಗೆ ಸಾಕಷ್ಟು ಕಾಲಾವಕಾಶವನ್ನು ನೀಡಿದರೂ ಸಹ ತಮ್ಮ ಆಕ್ಷೇಪಣೆಯನ್ನು ಸಲ್ಲಿಸಿರುವುದಿಲ್ಲ. ಆದರೆ ಅವರಿಗೆ ಕಳುಹಿಸಲಾಗಿದ್ದ ಪತ್ರದ ಸ್ವೀಕೃತಿಯನ್ನು ಪಡೆಯಲಾಗಿರುತ್ತದೆ. ಆದ್ದರಿಂದ ಸದರಿಯವರ ಆಕ್ಷೇಪಣೆ ಇಲ್ಲವೆಂದು ಪರಿಗಣಿಸಲಾಗಿದೆ.

4. 1ನೇ ಎದುರುದಾರರ ಆಕ್ಷೇಪಣೆಯ ಮೇಲೆ ದೂರುದಾರರ ಪ್ರತ್ಯುತ್ತರವನ್ನು ಕರೆಯಲಾಗಿದ್ದು, ಸದರಿಯವರು ತಮ್ಮ ಪ್ರತ್ಯುತ್ತರದಲ್ಲಿ ತಮ್ಮ ದೂರಿನಲ್ಲಿ ಮಾಡಿರುವಂತಹ ಆರೋಪಗಳನ್ನು ಪುನರುಚ್ಚರಿಸಿರುತ್ತಾರೆ.

5. ಈ ಹಂತದಲ್ಲಿ ಪ್ರಕರಣದ ತನಿಖೆಯನ್ನು ಈ ಸಂಸ್ಥೆಯ ತಾಂತ್ರಿಕ ಕೋಶದ ಮುಖ್ಯ ಅಭಿಯಂತರರಿಗೆ ತನಿಖೆ ಕೈಗೊಂಡು ವರದಿಯನ್ನು ಸಲ್ಲಿಸುವಂತೆ ತಿಳಿಸಲಾಗಿದ್ದು, ಅದರಂತೆ ಪ್ರಕರಣದ ತನಿಖೆಯನ್ನು ಸಹಾಯಕ ಕಾರ್ಯಪಾಲಕ ಅಭಿಯಂತರರು-3 ಇವರಿಗೆ ವಹಿಸಲಾಗಿರುತ್ತದೆ. ಸಹಾಯಕ ಕಾರ್ಯಪಾಲಕ ಅಭಿಯಂತರರು- 3 ರವರು ತನಿಖಾ ವರದಿಯನ್ನು ಸಲ್ಲಿಸಿದ್ದು, ಅದರಲ್ಲಿ ಸ್ಥಳ ತನಿಖಾ ಕಾಲದಲ್ಲಿ ತಂಗಡಗಿ ಯಿಂದ ನಲವತ್ತವಾಡ ರಸ್ತೆಯನ್ನು ಪರಿಶೀಲಿಸಿದಾಗ, 4.80 ಕಿ.ಮೀ ಯಿಂದ 9.447 ಕಿ.ಮೀ ರವರೆಗೆ ಹಾಗೂ 22.80 ಕಿ.ಮಿ. ಯಿಂದ 25.54 ಕಿ.ಮೀ ವರೆಗೆ ರಸ್ತೆಗೆ ಡಾಂಬರೀಕರಣ ಮಾಡಲಾಗಿದ್ದು, ಅದನ್ನು ಅಳತೆ ಪುಸ್ತಕದಲ್ಲಿ ದಾಖಲಿಸಲಾಗಿದೆಂದು, ಸದರಿ ರಸ್ತೆಯು ಸುಸ್ಥಿತಿಯಲ್ಲಿದೆ ಎಂದು, ಆದರೆ ರಸ್ತೆಯ ಅಂಚಿನಲ್ಲಿ ಕೆಲವು ಭಾಗದಲ್ಲಿ ದುರುಸ್ತಿ ಮಾಡಿರುವುದು ಕಂಡುಬಂದಿರುತ್ತದೆಂದು ತಿಳಿಸಿರುತ್ತಾರೆ. ಹಾಗೆಯೇ ರಸ್ತೆಯ ಅಗಲವನ್ನು ಹಲವು ಭಾಗದಲ್ಲಿ ಪರೀಕ್ಷಿಸಲಾಗಿ ಕೆಲವು ಕಡೆ ಅದರ ಅಗಲ 3.75 ಮೀಟರ ಇದ್ದು, ಕೆಲವು ಕಡೆ 3.85ಮೀಟರಗಳಿರುತ್ತವೆ. ಈ ಅಳತೆಯು ಅಳತೆ ಪುಸ್ತಕದಲ್ಲಿರುವ ಅಳತೆಗೆ ಹೊಂದಾಣಿಕೆಯಾಗಿರುತ್ತದೆಂದು ತಿಳಿಸಿರುತ್ತಾರೆ. ಇದಲ್ಲದೇ 4 ಕಡೆ ರಸ್ತೆಯಲ್ಲಿ ಅಗೆದು ರಸ್ತೆಗೆ ಹಾಕಿದ್ದ ಡಾಂಬರನ್ನು, ಡಾಂಬರಿನ ದಪ್ಪವನ್ನು ಅಳೆಯಲಾಯಿತ್ತೆಂದು, ಸದರಿ ಡಾಂಬರಿನ ಸ್ಯಾಂಪಲ್ ಅನ್ನು ಗುಣನಿಯಂತ್ರಣ ವಿಭಾಗಕ್ಕೆ ಪರೀಕ್ಷೆಗಾಗಿ ನೀಡಲಾಗಿದ್ದು, ರಸ್ತೆಯ ದಪ್ಪ (1) 25, 30 ಎಂ.ಎಂ.– 125 ಎಂ.ಎಂ., (2) 25, 26 ಎಂ.ಎಂ. – 125 ಎಂ.ಎಂ., (3) 25, 28 ಎಂ.ಎಂ. – 150 ಎಂ.ಎಂ. (4) 28, 30 ಎಂ.ಎಂ. – 150 ಎಂ.ಎಂ. ಇರುತ್ತದೆಂದು ತಿಳಿಸಿರುತ್ತಾರೆ. ಸದರಿ ರಸ್ತೆಯ ದಪ್ಪವು ಅಂದಾಜು ಪಟ್ಟಿಯಲ್ಲಿ ತಿಳಿಸಿರುವಂತೆ ಹಾಗೂ ಅಳತೆ ಪುಸ್ತಕದಲ್ಲಿ ದಾಖಲಿಸಿರುವ ಅಳತೆಗೆ ಹೋಲಿಕೆಯಾಗಿರುತ್ತದೆ ಎಂದು ತಿಳಿಸಿರುತ್ತಾರೆ. ಇದಲ್ಲದೇ ರಸ್ತೆಯಲ್ಲಿ ಕಿ.ಮೀ ಮತ್ತು ಹೆಕ್ಟೋಮೀಟರ್‌ಗಳನ್ನು ತೋರಿಸುವ ಕಲ್ಲು ಕಂಡು ಬಂದಿತ್ತೆಂದು, ಸದರಿ ಕಲ್ಲುಗಳ ಫೋಟೋಗಳನ್ನು

N. ...

ತೆಗೆಯಲಾಗಿರುತ್ತೆಂದು ತಿಳಿಸಲಾಗಿರುತ್ತದೆ. ಇದಲ್ಲದೇ ರಸ್ತೆ ಮಧ್ಯದಲ್ಲಿ ಸಿ.ಡಿ. ಗಳನ್ನು ಪರಿಶೀಲಿಸಿದ್ದು ಅವುಗಳನ್ನು ಸಹ ದುರಸ್ತಿಪಡಿಸಿರುವುದು ಕಂಡುಬಂದಿರುತ್ತದೆ. ಆಲಮಟ್ಟಿ ಕೃಷ್ಣ ಭಾಗ್ಯ ಜಲನಿಗಮ ನಿಯಮಿತ ಇಲ್ಲಿಯ ಗುಣ ನಿಯಂತ್ರಣ ವಿಭಾಗದಿಂದ ರಸ್ತೆಯ ಗುಣಮಟ್ಟದ ವರದಿಯನ್ನು ಪಡೆಯಲಾಗಿದ್ದು ಸದರಿ ವರದಿಯಲ್ಲಿ ರಸ್ತೆಯ ಗುಣಮಟ್ಟ ತೃಪ್ತಿಕರವಾಗಿರುತ್ತದೆಂದು ತಿಳಿಸಿರುತ್ತಾರೆ.

6. ಈ ಎಲ್ಲಾ ಅಂಶಗಳ ಹಿನ್ನಲೆಯಲ್ಲಿ ತನಿಖಾಧಿಕಾರಿಯವರು ತಂಗಡಗಿಯಿಂದ ನಲವತ್ತವಾಡ ವರೆಗಿನ ರಸ್ತೆಯು ತೃಪ್ತಿಕರವಾಗಿರುತ್ತದೆಂದು ತಿಳಿಸಿರುತ್ತಾರೆ. ಸದರಿ ತನಿಖಾ ವರದಿಯ ಆಧಾರದ ಮೇಲೆ ದೂರುದಾರರ ಪ್ರತ್ಯುತ್ತರವನ್ನು ಕರೆಯಲಾಗಿದ್ದು, ಆದರೆ ದೂರುದಾರರು ಇಲ್ಲಿಯವರೆಗೆ ಪ್ರತ್ಯುತ್ತರವನ್ನು ಸಲ್ಲಿಸಿರುವುದಿಲ್ಲ.

7. ದೂರಿನಂಶಗಳನ್ನು, ಎದುರುದಾರರ ಆಕ್ಷೇಪಣೆಯನ್ನು ಹಾಗೂ ಪ್ರಕರಣದಲ್ಲಿ ಹಾಜರುಪಡಿಸಿರುವ ದಾಖಲೆಗಳನ್ನು ಪರಿಶೀಲಿಸಿದಲ್ಲಿ, ತಂಗಡಗಿ ಕ್ರಾಸ್‌ನಿಂದ ನಲವತ್ತವಾಡ ರಸ್ತೆಯವರೆಗೆ 4.80. ಕಿ.ಮೀ. ಯಿಂದ 9.10 ಕಿ.ಮೀ. ಹಾಗೂ 22.60. ಕಿ.ಮೀ. ಯಿಂದ 25.80 ಕಿ.ಮೀ ವರೆಗೆ ಒಟ್ಟು 7.50 ಕಿ.ಮೀ ರಸ್ತೆಯನ್ನು ದುರಸ್ಥಿಗೊಳಿಸಿ ಅಭಿವೃದ್ಧಿಪಡಿಸುವ ಬಗ್ಗೆ ಅಂದಾಜು ಪಟ್ಟಿಯನ್ನು ಹಾಜರುಪಡಿಸಲಾಗಿರುತ್ತದೆ. ಇದಕ್ಕೆ ಪೂರಕವಾಗಿ ಅಳತೆ ಪುಸ್ತಕದ ಜೆರಾಕ್ಸ್ ಪ್ರತಿಯನ್ನು ಹಾಜರುಪಡಿಸಿದ್ದು, ಸದರಿ ಅಳತೆ ಪುಸ್ತಕವನ್ನು ಪರಿಶೀಲಿಸಿದಲ್ಲಿ ದಿ:30/04/2014ರವರೆಗೆ ಮಾತ್ರ ಕಾಲಕಾಲಕ್ಕೆ ರಸ್ತೆ ಕಾಮಗಾರಿಯ ಪ್ರಗತಿಯನ್ನು ಪರಿಶೀಲಿಸಿರುವುದು ಕಂಡು ಬರುತ್ತದೆ. ಸದರಿ ಅಳತೆ ಪುಸ್ತಕದಲ್ಲಿನ ಅಳತೆಗೂ ಮತ್ತು ಎಸ್ಟಿಮೇಟ್‌ನಲ್ಲಿರುವ ಅಳತೆಗಳಿಗೂ ಹೊಂದಾಣಿಕೆಯಾಗದೇ ಇರುವುದು ಕಂಡು ಬರುತ್ತದೆ. ಸದರಿ ಅಳತೆ ಪುಸ್ತಕದ ಪುಟ (2)ರಲ್ಲಿ ಕೆಲಸ ಮುಕ್ತಾಯಗೊಂಡ ದಿನಾಂಕವನ್ನು 03/05/2014 ಎಂದು ತೋರಿಸಲಾಗಿದೆ. 1ನೇ ಎದುರುದಾರರು ಸಲ್ಲಿಸಿರುವ ದಿ:20/02/2015ರ ಪತ್ರದಲ್ಲಿ ಮುದ್ದೇಬಿಹಾಳ ತಾಲ್ಲೂಕಿನ ತಂಗಡಗಿ ಕ್ರಾಸ್‌ನಿಂದ ನಾಲತ್ತವಾಡ್ ರಸ್ತೆಯವರೆಗಿನ ರಸ್ತೆ ಸುಧಾರಣಾ ಕಾಮಗಾರಿಯನ್ನು ಗುತ್ತಿಗೆದಾರರಾದ ಶ್ರೀ ಬಿ.ಎಸ್. ಪಾಟೀಲ್ ರವರು ಕೈಗೊಂಡಿದ್ದು, ಕಾಮಗಾರಿಯನ್ನು ದಿ:05/03/2014 ರಂದು ಪ್ರಾರಂಭಿಸಿರುತ್ತಾರೆಂದು ಕಾಮಗಾರಿಯು ಪೂರ್ಣಗೊಳ್ಳಬೇಕಾದ ದಿ:03/05/2014 ಎಂದು ಇದ್ದು, ಆದರೆ, ಕಾಮಗಾರಿ ವಾಸ್ತವಾಗಿ ಪೂರ್ಣಗೊಂಡ ದಿನಾಂಕ ಎಂದು ನಮೂದಿಸಿರುವ ಶೀರ್ಷಿಕೆಯ ಮುಂದೆ ಕಾಮಗಾರಿ ಪ್ರಗತಿಯಲ್ಲಿರುತ್ತದೆ ಎಂದು ತಿಳಿಸಿರುತ್ತಾರೆ. ಅಂದರೆ, ದಿ:20/02/2015 ರಂದು ಸದರಿ ಕಾಮಗಾರಿ ಪ್ರಗತಿಯಲ್ಲಿತ್ತೆಂದು ಕಂಡು ಬರುತ್ತದೆ. ಸದರಿ ಪತ್ರದ ಪ್ರತಿಯನ್ನು ಹಾಜರುಪಡಿಸಲಾಗಿದೆ. ಮೇಲೆ ತಿಳಿಸಿದ ನಮೂದು, ಕ್ರ.ಸಂಖ್ಯೆ:19ರಲ್ಲಿ ಹಾಗೂ ಸದರಿ ಪತ್ರದ ಪುಟ:04 ರಲ್ಲಿ ಇರುತ್ತದೆ. ಗುತ್ತಿಗೆದಾರರಿಗೆ ಇಲ್ಲಿಯವರೆಗೆ ಸಂದಾಯ ಮಾಡಿದ ಬಿಲ್ಲು ಹಾಗೂ ದಿನಾಂಕ ಎಂದು ಇರುವ ಶೀರ್ಷಿಕೆ ಮುಂದೆ "ಮೊದಲನೇ ಚಾಲ್ತಿ ಬಿಲ್ಲಿನ ಮೊತ್ತ ರೂ.1,16,21,309/-ಎಂದು ದಿ:16/07/2014" ಎಂದು ನಮೂದಿಸಿರುವುದು ಸ್ಪಷ್ಟ ಪಡುತ್ತದೆ. ಸದರಿ ನಮೂದು ಪುಟ 4

N. Anand

ಕ್ರ.ಸಂ.21ರಲ್ಲಿ ಇರುತ್ತದೆ. ಕ್ರ.ಸಂ.22ನೇ ಶೀರ್ಷಿಕೆಯು ಗುತ್ತಿಗೆದಾರರು ನಿರ್ವಹಿಸಬೇಕಾದ ಕಾಮಗಾರಿಗಳ ವಿವರ ಎಂದು ಇರುವ ಶೀರ್ಷಿಕೆಯ ಮುಂದೆ "side shoulders work to be completed, Nala trimming work to be completed" ಎಂದು ಇರುತ್ತದೆ. ಆದರೆ, ಅಳತೆ ಪುಸ್ತಕದಲ್ಲಿ Date of completion of work ಎಂದು ಬರೆದು ದಿನಾಂಕ:03/05/2014 ಎಂದು ತೋರಿಸಲಾಗಿದೆ. ಚೆಕ್ ಲಿಸ್ಟ ಆಫ್ ವರ್ಕ ಬಿಲ್ಸ್ ಎಂದು ಇರುವ ಪ್ರತಿಯನ್ನು ಹಾಜರುಪಡಿಸಿದ್ದು, ಅದರೊಳಗೆ ಕಾಮಗಾರಿಯನ್ನು ಅಂತಿಮಗೊಳಿಸಿದ ದಿನಾಂಕದ ಬಗ್ಗೆ ಶೀರ್ಷಿಕೆ ಇದ್ದು, ಅದರ ಮುಂದೆ "work under progress" ಎಂದು ಇರುತ್ತದೆ. M.B Number and Page No. of work recorded and date of recording ಎನ್ನುವ ಶೀರ್ಷಿಕೆ ಮುಂದೆ M.B. No.1230 Page No. 2 to 19 ಎಂದು ನಮೂದಿಸಿರುವುದು ಕಂಡು ಬರುತ್ತದೆ. ಆದರೆ, ದಿನಾಂಕವನ್ನು ನಮೂದಿಸಿರುವುದಿಲ್ಲ. ಹಾಗೆಯೇ ಅದೇ ದಾಖಲೆಯಲ್ಲಿ ಕ್ರ.ಸಂ.17 ರಲ್ಲಿ date of checkmeasurement in M.B ಎಂದು ಶೀರ್ಷಿಕೆಯಿದ್ದು, ಅದರ ಮುಂದೆ ಎಂ.ಬಿ.ನಂ.1230 ಎಂದು ಇದ್ದು, ಅಳತೆಯನ್ನು ಚೆಕ್‌ಮೆಷರ್ ಮಾಡಿದ ದಿನಾಂಕವನ್ನು ನಮೂದಿಸಿರುವುದಿಲ್ಲ. ರಸ್ತೆಯ ಕಾಮಗಾರಿಯು ಪೂರ್ಣಗೊಂಡ ನಂತರ ತೆಗೆದಿರುವ ಫೋಟೋಗಳ ಜೆರಾಕ್ಸ್ ಪ್ರತಿಯನ್ನು ಹಾಜರುಪಡಿಸಿದ್ದು, ಅದರಲ್ಲಿ ದಿ:20/02/2015 ರಂದು ತೆಗೆದಿರುವ ಫೋಟೋಗಳ ಜೆರಾಕ್ಸ್ ಪ್ರತಿಯನ್ನು ಹಾಜರುಪಡಿಸಿರುತ್ತಾರೆ. ದೂರುದಾರರು ದೂರಿನೊಡನೆ ಹಾಜರುಪಡಿಸಿರುವ ಫೋಟೋಗಳನ್ನು ಹಾಜರುಪಡಿಸಿದ್ದು, ದೂರನ್ನು ದಿ: 18/12/2014 ರಂದು ಸಲ್ಲಿಸಲಾಗಿರುತ್ತದೆ. ಆದ್ದರಿಂದ, ದಿ:18/12/2014ರಂದು ಅಥವಾ ಅದಕ್ಕೂ ಪೂರ್ವದಲ್ಲಿ ತೆಗೆಯಲಾಗಿದ್ದ ಫೋಟೋಗಳನ್ನು ಪರಿಶೀಲಿಸಲಾಗಿ, ಸದರಿ ರಸ್ತೆ ಹಾಳಾಗಿರುವುದು ಮತ್ತು ರಸ್ತೆಯ ಜಲ್ಲಿ ಮೇಲಕ್ಕೆ ಎದ್ದಿರುವುದು ಕಂಡು ಬರುತ್ತದೆ. ಆದರೆ, ಎದುರುದಾರರು ಹಾಜರುಪಡಿಸಿರುವ ಫೋಟೋವನ್ನು ಪರಿಶೀಲಿಸಿದಲ್ಲಿ, ಅದನ್ನು ದಿ:20/02/2015 ರಂದು ತೆಗೆಯಲಾದ ಫೋಟೋವೆಂದು ತೋರಿಸಲಾಗಿದೆ. ದೂರುದಾರರು ಹಾಜರುಪಡಿಸಿರುವ ಫೋಟೋಗಳನ್ನು ಹಾಗೂ ಎದುರುದಾರರು ಹಾಜರುಪಡಿಸಿರುವ ಸದರಿ ಫೋಟೋಗಳನ್ನು ಪರಿಶೀಲಿಸಿದಲ್ಲಿ, ಎದುರುದಾರರು ತಿಳಿಸಿರುವಂತೆ ದಿ:20/02/2015 ರಂದು ಅವರು ಹಾಜರುಪಡಿಸಿರುವ ಫೋಟೋದಲ್ಲಿ ಇದ್ದಂತೆ ರಸ್ತೆಯ ಪರಿಸ್ಥಿತಿ ಇತ್ತೆಂದು ನಂಬಲು ಸಾಧ್ಯವಿರುವುದಿಲ್ಲ. ಇದಲ್ಲದೇ, 1ನೇ ಎದುರುದಾರರು ತಮ್ಮ ದಿ:20/02/2015ರ ಪತ್ರದಲ್ಲಿ ಕಾಮಗಾರಿ ಪೂರ್ಣಗೊಂಡಿರುವುದಿಲ್ಲವೆಂದು, ಕಾಮಗಾರಿ ಪ್ರಗತಿಯಲ್ಲಿರುತ್ತದೆ ಎಂದು ತಿಳಿಸಿರುತ್ತಾರೆ. (ಸದರಿ ಪತ್ರದ ಪುಟ-4ರ ಹಾಗೂ ಕ್ರ.ಸಂ.19ರಲ್ಲಿ ಈ ಬಗ್ಗೆ ನಮೂದು ಇರುತ್ತದೆ). ಇದರಿಂದ, ದಿ:20/02/2015 ರಂದು ಕಾಮಗಾರಿ ಪ್ರಗತಿಯಲ್ಲಿತ್ತೆಂದು ಪರಿಗಣಿಸಿದಲ್ಲಿ, ಎದುರುದಾರರು ಹಾಜರುಪಡಿಸಿರುವ ಫೋಟೋಗಳಲ್ಲಿ ದಿ:20/02/2015 ರಂದು ತೆಗೆದಿರುವ ಫೋಟೋದಲ್ಲಿ "Photographs after execution of work as on 20/02/2015" ಎಂದು ನಮೂದಿಸಲಾಗಿದ್ದು, ಅದರೊಳಗೆ

N. Anand

ನೀಡಲಾಗಿರುವ ಮಾಹಿತಿ ಹಾಗೂ ತೋರಿಸಲಾಗಿರುವ ವಸ್ತುಸ್ಥಿತಿ ಮೇಲಿನ ಕಾರಣಗಳಿಗೆ ನಂಬಲರ್ಹವಾಗಿರುವುದಿಲ್ಲ.

8. ರಸ್ತೆಗೆ ಹಾಕಿದ್ದ ಟಾರಿನ ಗುಣಮಟ್ಟವನ್ನು ಪರೀಕ್ಷಿಸಲು ಮಾದರಿಯನ್ನು ಪರೀಕ್ಷಿಸಿ ವರದಿಯನ್ನು ನೀಡಲಾಗಿದ್ದು, ಸದರಿ ವರದಿಯನ್ನು ಹಾಜರುಪಡಿಸಲಾಗಿದೆ. ಸದರಿ ವರದಿಯನ್ನು ರಸ್ತೆ ಕಾಮಗಾರಿಗೆ ಉಪಯೋಗಿಸಲಾಗಿರುವ ಟಾರ್‌ನ ಗುಣಮಟ್ಟದ ಬಗ್ಗೆ ತೆಗೆದುಕೊಳ್ಳಲಾದ ಮಾದರಿಯಲ್ಲಿ 8ನೇ ಕಿ.ಮಿ ಬಳಿ ಹಾಗೂ 23.90 ಕಿ.ಮೀ. ಬಳಿ ತೆಗೆದುಕೊಳ್ಳಲಾಗಿರುವ "Marginally satisfies the tender specification" ಎಂದು ನಮೂದಿಸಲಾಗಿದೆ. ಇದರಿಂದ, ರಸ್ತೆಗೆ ಹಾಕಿರುವ ಟಾರಿನ ಗುಣಮಟ್ಟವು ಸಂಪೂರ್ಣವಾಗಿ ತೃಪ್ತಿಕರವಾಗಿಲ್ಲವೆಂದು ಕಂಡು ಬರುತ್ತದೆ. ಆದ್ದರಿಂದ, ಈ ಮೇಲೆ ಹೇಳಿದ ಕಾರಣಗಳ ಹಿನ್ನೆಲೆಯಲ್ಲಿ ರಸ್ತೆಯ ಗುಣಮಟ್ಟ ತೃಪ್ತಿಕರವಾಗಿಲ್ಲವೆಂದು, ಕಾಮಗಾರಿಯನ್ನು ಟೆಂಡರ್ ಅಗ್ರೀಮೆಂಟ್ ಪ್ರಕಾರ ಸಕಾಲದಲ್ಲಿ ಮಾಡಿ ನಿರ್ವಹಿಸಿಲ್ಲವೆಂದು ಕಂಡು ಬರುತ್ತದೆ. ಇದಲ್ಲದೇ ಮೇಲೆ ಹೇಳಿದಂತೆ ದಿ:30/04/2014ರ ನಂತರ ಕಾಮಗಾರಿಯ ಪ್ರಗತಿಯನ್ನು ಪರಿಶೀಲಿಸಿ ಅಳತೆ ಪುಸ್ತಕದಲ್ಲಿ ಸ್ಪಷ್ಟವಾಗಿ ನಮೂದು ಮಾಡದೇ ಇರುವುದು ಸಹ ಕಂಡು ಬರುತ್ತದೆ. ಇದಲ್ಲದೇ, ಕಾಮಗಾರಿ ಅಂತ್ಯಗೊಂಡ ನಂತರ ಸಹಾಯಕ ಕಾರ್ಯಪಾಲಕ ಅಭಿಯಂತರರು ದಿ:02/05/2014 ರಂದು ಚೆಕ್‌ಮೆಷರ್ಡ್ ಅಂಡ್ ಫೌಂಡ್ ಕರೆಕ್ಟ್ 100% ಎಂದು ಪ್ರಮಾಣೀಕರಿಸಿ ಸಹಿ ಮಾಡಿರುವುದು ಕಂಡು ಬರುತ್ತದೆ. ಆದರೆ, ಸದರಿ ದಿನಾಂಕದಂದು ಕಾಮಗಾರಿಯು ಪ್ರಗತಿಯಲ್ಲಿತ್ತೆಂದು ಮೇಲೆ ಹೇಳಿದ ಚೆಕ್‌ಲಿಸ್ಟ್ ನಿಂದ ಕಂಡು ಬರುತ್ತದೆ. ಆದ್ದರಿಂದ, ಸಹಾಯಕ ಕಾರ್ಯಪಾಲಕ ಅಭಿಯಂತರರು ಕಾಮಗಾರಿಯ ಪ್ರಗತಿಯನ್ನು ಸರಿಯಾಗಿ ಪರಿಶೀಲಿಸಿದ್ದರು ಎಂಬುದರ ಬಗ್ಗೆ ಅನುಮಾನ ಉಂಟಾಗುತ್ತದೆ. ಈ ಮೇಲಿನ ಎಲ್ಲಾ ಅಂಶಗಳನ್ನು ಸರಿಯಾಗಿ ಪರಿಶೀಲಿಸಿದಲ್ಲಿ, ಮೇಲೆ ಹೇಳಿದಂತೆ ಮುದ್ದೇಬಿಹಾಳ ತಾಲ್ಲೂಕಿನ ತಂಗಡಗಿಯಿಂದ ನಲವತ್ತವಾಡ ರಸ್ತೆಯ ಕಾಮಗಾರಿಯನ್ನು ದಿ:03/05/2014ರ ಒಳಗೆ ಅಂದರೆ 60 ದಿನಗಳ ಒಳಗೆ ನಿರ್ವಹಿಸಬೇಕಾಗಿದ್ದು, ಹಾಗೇ ಸದರಿ ಕಾಮಗಾರಿಯನ್ನು ನಿಗಧಿತ ದಿನಾಂಕದಲ್ಲಿ ಗುತ್ತಿಗೆದಾರರು ನಿರ್ವಹಿಸದೇ ಇರುವುದು ಕಂಡು ಬರುತ್ತದೆ. ಈ ಬಗ್ಗೆ ಯಾವ ಕ್ರಮ ಜರುಗಿಸಲಾಗಿರುತ್ತದೆ ಎಂಬ ಬಗ್ಗೆ ಎದುರುದಾರರು ಯಾವುದೇ ಮಾಹಿತಿಯನ್ನು ಹಾಜರುಪಡಿಸಿರುವುದಿಲ್ಲ. ಇದಲ್ಲದೆ, Form PWG Revised ಎಂದು ಇರುವ ರನ್ನಿಂಗ್ ಅಕೌಂಟ್ ಬಿಲ್‌ನಲ್ಲಿ Memorandum of payment ಎಂದು ಇರುವ ಜಾಗವನ್ನು ಸಂಪೂರ್ಣವಾಗಿ ಖಾಲಿ ಬಿಟ್ಟು, ಅದಕ್ಕೆ ಯಾವುದೇ ಅಧಿಕಾರಿಗಳು ಸಹಿ ಮಾಡದೇ ಇರುವುದು ಕಂಡು ಬರುತ್ತದೆ. ಸದರಿ ದಾಖಲೆಯನ್ನು ಹಾಜರುಪಡಿಸಲಾಗಿದೆ. ರನ್ನಿಂಗ್ ಅಕೌಂಟ್ ಬಿಲ್ಲಿನ ವಿವರಗಳನ್ನು ಕಾರ್ಯಪಾಲಕ ಅಭಿಯಂತರರು ಸಹ ಪರಿಶೀಲಿಸಿರುವುದಾಗಿ ಸಹಿ ಮಾಡಿರುತ್ತಾರೆ. ಅದೇ ರೀತಿ ಚೆಕ್ ಲಿಸ್ಟ್ ಅನ್ನು ಸಹ ಕಾರ್ಯಪಾಲಕ ಅಭಿಯಂತರರು ಪರಿಶೀಲಿಸಿ ಸಹಿ ಮಾಡಿರುವುದು ಕಂಡು ಬರುತ್ತದೆ. ಈ ಮೇಲೆ ಹೇಳಿದಂತ ಎಲ್ಲ ಅಂಶಗಳನ್ನು ಪರಿಶೀಲಿಸಿದಲ್ಲಿ ಕಾಮಗಾರಿಯ

N. Anande

ಅನುಷ್ಠಾನದಲ್ಲಿ ವಿಳಂಬ ಉಂಟಾಗಿದ್ದು ಮತ್ತು ಕಾಮಗಾರಿಯ ಗುಣಮಟ್ಟದಲ್ಲೂ ಸಹ ಮೇಲೆ ತಿಳಿಸಿದಂತೆ ತೃಪ್ತಿಕರ ಗುಣಮಟ್ಟ ಇಲ್ಲದೇ ಇರುವುದು ಕಂಡು ಬಂದರೂ ಸಹ, ಈ ಬಗ್ಗೆ ಎದುರುದಾರರು ಯಾವುದೇ ಕ್ರಮ ಜರುಗಿಸದೇ ಇರುವುದು ಕಂಡು ಬರುತ್ತದೆ. ಆದ್ದರಿಂದ, ಎದುರುದಾರರು ಯಾವುದೇ ಕ್ರಮ ಜರುಗಿಸದೇ ಕರ್ತವ್ಯಲೋಪವೆಸಗಿರುವುದು ಮೇಲ್ನೋಟಕ್ಕೆ ಕಂಡು ಬರುತ್ತದೆ.

9. ಮೇಲೆ ಚರ್ಚಿಸಿದ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ನಾಗರೀಕ ಸೇವೆ (ನಡತೆ) ನಿಯಮಗಳು 1966ರ ನಿಯಮ 3(1)(ii) ಮತ್ತು (iii) ರನ್ವಯ ಎದುರುದಾರರುಗಳು ಶಿಸ್ತು ಕ್ರಮಕ್ಕೆ ಬಾಧ್ಯರಾಗಿರುತ್ತಾರೆಂದು ಕಂಡುಬಂದಿದ್ದರಿಂದ, **ಎದುರುದಾರರಾದ (1) ಶ್ರೀ ಎನ್.ಡಿ. ಪಾಟೀಲ್, ಕಾರ್ಯನಿರ್ವಾಹಕ ಅಭಿಯಂತರರು, ನಂ.3, ಹೊಲಗಾಲುವೆ ವಿಭಾಗ, ಕೆ.ಬಿ.ಜೆ.ಎನ್.ಎಲ್., ಆಲಮಟ್ಟಿ, ಬಸವನಬಾಗೇವಾಡಿ ತಾಲ್ಲೂಕು, ವಿಜಾಪುರ ಜಿಲ್ಲೆ.** ಇವರ ವಿರುದ್ಧ ಶಿಸ್ತು ನಡವಳಿಕೆ ಕ್ರಮ ಜರುಗಿಸಲು ಮತ್ತು ಹಾಗೆಯೇ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 14–ಎ ರ ಅಡಿಯಲ್ಲಿ ಇಲಾಖಾ ವಿಚಾರಣೆ ನಡೆಸಲು ಹಾಗೂ **(2) ಶ್ರೀ ಎಸ್.ಪಿ. ಕುಲಕರ್ಣಿ, ಕಿರಿಯ ಅಭಿಯಂತರರು (ನಿವೃತ್ತ), ನಂ.12, ಹೊಲಗಾಲುವೆ ಉಪವಿಭಾಗ, ಕೆ.ಬಿ.ಜೆ.ಎನ್.ಎಲ್., ಆಲಮಟ್ಟಿ, ಬಸವನಬಾಗೇವಾಡಿ ತಾಲ್ಲೂಕು, ವಿಜಾಪುರ ಜಿಲ್ಲೆ ಇವರು ಈಗಾಗಲೇ ನಿವೃತ್ತಿ ಹೊಂದಿರುವುದರಿಂದ ಇವರ ವಿರುದ್ಧ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳ ನಿಯಮ 214(2)(b)(i) ರಡಿ** ಇಲಾಖಾ ವಿಚಾರಣೆ ನಡೆಸಲು ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ, ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12(3) ರನ್ವಯ ಪ್ರದತ್ತವಾದ ಅಧಿಕಾರದಡಿ, ಶಿಸ್ತು ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಿದೆ.

10. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(4) ರ ಪ್ರಕಾರ, ಶಿಸ್ತು ಪ್ರಾಧಿಕಾರವು ವರದಿಯನುಸಾರ ಕೈಗೊಂಡ ಕ್ರಮದ ಬಗ್ಗೆ ಅಥವಾ ಕೈಗೊಳ್ಳಬಹುದಾದ ಕ್ರಮದ ಬಗ್ಗೆ, ಈ ವರದಿ ತಲುಪಿದ ದಿನಾಂಕದಿಂದ **ಮೂರು ತಿಂಗಳೊಳಗಾಗಿ** ಈ ಪ್ರಾಧಿಕಾರಕ್ಕೆ ವರದಿ ಮಾಡಲು ಸೂಚಿಸಲಾಗಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

N. Anand 6/1

**(ನ್ಯಾಯಮೂರ್ತಿ ಎನ್.ಆನಂದ)**
**ಉಪಲೋಕಾಯುಕ್ತರು,**
**ಕರ್ನಾಟಕ ರಾಜ್ಯ,**
**ಬೆಂಗಳೂರು.** 6/1/17